ಇಂಥ ಸುಜಾತಾಳ ವ್ಯಾಪಾರ ಬೆಳೆಸಲು ಅಖ್ತರ ಕೀನ್ಯಾದಲ್ಲಿ ಒಂದು ರೀತಿಯಿಂದ ಸ್ಥಳೀಯ ವ್ಯಾಪಾರಿಗಳನ್ನು, ಮತ್ತು ಅಧಿಕಾರಿಗಳನ್ನು ಪರಿಚಯಿಸಿಕೊಟ್ಟು ಸಹಕರಿಸುತ್ತಿದ್ದ. ಅವನಿಗೆ ಗೊತ್ತಾಗದಂತೆಯೇ ಅನ್–ಆಕ್ಸೆಸರೀಸ್ ಸಂಸ್ಥೆಯ ವ್ಯಾಪಾರವಹಿವಾಟಿನಲ್ಲಿದ್ದ ಸ್ಥಾನವನ್ನು ಅವಳು ಬಿಟ್ಟುಕೊಟ್ಟಿದ್ದಂತಿತ್ತು. ಈ ಪತ್ರದ ಹಿಂದೆ ಇರಬಹುದಾದ ಕಥೆಯಲ್ಲಿ ಕಾರ್ಪೊರೇಟ್ ಯುದ್ಧವಿರಬಹುದೇ ಎನ್ನುವ ಕುತೂಹಲ ಮತ್ತು ಅದರಿಂದಾಗಿ ಸುಜಾತಾಳ ಮೇಲೆ ಏನು ಪ್ರಭಾವ ಬಿದ್ದಿರಬಹುದು ಎನ್ನುವ ಕಾಳಜಿ ಅಖ್ತರನನ್ನು ಕಾಡಿತು. ತಕ್ಷಣಕ್ಕೆ ಅವಳಿಗೆ ಕಾಲ್ ಮಾಡಿ ವಿಚಾರಿಸಬೇಕು ಅನ್ನಿಸಿತಾದರೂ ಅವನು ತಡೆದ.

ಅಖ್ತರ ಸಾಮಾಜಿಕ ಜಾಲತಾಣದಲ್ಲಿಲ್ಲದಿದ್ದರೂ, ಜಾಲತಾಣವಂತೂ ಇದ್ದೇ ಇತ್ತು. ಮಿಕ್ಕವರೆಲ್ಲರೂ ಅಲ್ಲಿ ವಿಹರಿಸುತ್ತಿದ್ದಾರೆ ಎನ್ನುವ ವಿಚಾರ ಅವನನ್ನು ತಟ್ಟಿತು. ಹಾಗೆ ತಟ್ಟಿದಾಕ್ಷಣಕ್ಕೆ ಅವನು ಕಂಪ್ಯೂಟರಿನ ಬ್ರೌಸರಿನಲ್ಲಿ ಸುಜಾತಾ ಮುಕುಂದ ಸಾಗರ, ಅನ್–ಆಕ್ಸೆಸರೀಸ್ ಎಂದು ಗೂಗಲ್ ಮಾಡಿದ. ಅಲ್ಲಿದ್ದ ಒಂದೊಂದೇ ಕೊಂಡಿಯನ್ನು ಒತ್ತುತ್ತಾ ಹೋದಾಗ ಸುದ್ದಿಗಳ ಮಹಾಪೂರವೇ ಹರಿದಿತ್ತು.

★★★

"ಚಿನ್ಮೂ, ನಮ್ಮ ಮುಂದಿರುವ ಒಂದು ದೊಡ್ಡ ಸವಾಲೆಂದರೆ ಸುಜಾತಾಳಿಂದ ಮಾರ್ಕೆಟಿಂಗ್ ವಿಭಾಗವನ್ನು ನಮ್ಮ ಕೈವಶ ಮಾಡಿಕೊಳ್ಳುವುದು. ಮಿಕ್ಕವೆಲ್ಲವನ್ನೂ ನಾವು ನಿಭಾಯಿಸಬಹುದಾದರೂ, ಅವಳಿಗಿರುವ ಕ್ಲಯಂಟ್ ಕನೆಕ್ಟನ್ನು ನಾವು ಗುಡ್–ವಿಲ್ ಹಾಳಾಗದಂತೆ ನಿಭಾಯಿಸಬೇಕು. ಸಾಕಷ್ಟು ಜನರನ್ನು ಅವಳಿರುವಾಗಲೇ ನಾನು ಟೇಕೋವರ್ ಮಾಡಿದ್ದೆನಾದರೂ, ಅವಳಿಗೆ ಕೆಲವು ಲಾಯಲ್ ಗಿರಾಕಿಗಳಿದ್ದಂತಿದ್ದಾರೆ. ಅವರುಗಳನ್ನು ಟೇಕೋವರ್ ಮಾಡುವುದು ಸುಲಭವಾದ ಕೆಲಸವೇನೂ ಅಲ್ಲ" ಎಂದು ಶಿವಾನಿ ಹೇಳಿದಳು.

"ಅದಕ್ಕೇ ನಾನು ಹೇಳುತ್ತಿರೋದು... ಸುಜಾತಾಗೆ ನಾವು ಇನ್ನೂ ಹೆಚ್ಚುಸಮಯ ನೀಡಬೇಕು... ಎಷ್ಟಾದರೂ ಸಂಸ್ಥೆ ಹುಟ್ಟಿದಾಗಿನಿಂದಲೂ ಇದರ ಜೊತೆ ಬೆಸೆದಿದ್ದಾಕೆ. ಈಗಲೂ ಕಂಪನಿಯ ಕಾಲು ಭಾಗದ ಸ್ವಾಮ್ಯ ಆಕೆಯ ಬಳಿಯಲ್ಲಿಯೇ ಇದೆ. ಹೀಗಿರುವಾಗ ನಾವು ಸಂಪೂರ್ಣವಾಗಿ ಇದನ್ನು ಕೈವಶಮಾಡಿಕೊಳ್ಳುವುದು ಸರಿಯಲ್ಲ."

"ಡಿಸೈನರುಗಳಿಗೆ ಪ್ರಪಂಚ ಜ್ಞಾನ ಇರೋದಿಲ್ಲ. ವ್ಯಾಪಾರ ಮಾಡೋದಕ್ಕೆ ಬರೋದಿಲ್ಲ... ಯು ನೀಡ್ ದಿಸ್ ಇನ್ ಯುವರ್ ಬ್ಲಡ್..." ಎಂದು ಶಿವಾನಿ ಚಿನ್ಮಯನನ್ನು ನೋಡುತ್ತಾ ಹೇಳಿದಳು. ಅದು ಸುಮ್ಮನೆ ಹೇಳಿದ ಮಾತೋ ಅಥವಾ ತನ್ನ ವಂಶಾವಳಿಯನ್ನು ಹೀಯಾಳಿಸಿದ ರೀತಿಯೋ ತಿಳಿಯದೇ ಚಿನ್ಮಯ ಸುಮ್ಮನಿದ್ದ. ಈ ವಿಷಯದಲ್ಲಿ ತಾನು ತಲೆಹಾಕಿದಷ್ಟೂ ಶಿವಾನಿ ಅವನನ್ನು ಮಟ್ಟಹಾಕುತ್ತಿದ್ದಳು.

ಈ ಮಾತುಕತೆಯಾದ ನಂತರ ಶಿವಾನಿ ಕೂತು ಅನ್–ಅಕ್ಸಸರೀಸ್ ಸಂಸ್ಥೆಯ ಗ್ರಾಹಕರ ಪಟ್ಟಿಯನ್ನು ವಿವರವಾಗಿ ಪರಿಶೀಲಿಸಿದಳು. ಪರಿಶೀಲಿಸಿದ್ದಲ್ಲದೇ ಆ ಪಟ್ಟಿಯನ್ನು ಮೂರು ವಿಭಾಗಗಳಲ್ಲಿ ವರ್ಗೀಕರಿಸಿದಳು. ಮೊದಲಿಗೆ ಅವಳು ಕೈವಶ ಮಾಡಿಕೊಂಡು ಈಗಾಗಲೇ ಒಳ್ಳೆಯ ಸಂಪರ್ಕ ಇದ್ದ ಹಳೆಯ–ಹೊಸ ಗ್ರಾಹಕರ ಪಟ್ಟಿ – 'ಎ' ಗುಂಪಿನಲ್ಲಿತ್ತು. ಅವಳ ಸುಪರ್ದಿಗೆ ಬಂದಿರುವ ಆದರೆ ಸುಜಾತಾಳ ಬಗ್ಗೆ ಕೇಳುವ, ಆಕೆಯ ಜೊತೆಯೇ ವ್ಯವಹರಿಸಬೇಕು ಎಂದು ಪಟ್ಟು ಹಿಡಿಯುತ್ತಲೇ ತಮ್ಮ ವ್ಯಾಪಾರವನ್ನು ಸಂಸ್ಥೆಯ ಜೊತೆ ಮುಂದುವರೆಸಿದವರ ಪಟ್ಟಿ 'ಬಿ' ಗುಂಪಿನಲ್ಲಿತ್ತು. 'ಬಿ' ಗುಂಪನ್ನು 'ಎ' ಗುಂಪಿಗೆ ಪರಿವರ್ತಿಸುವ ಕೆಲಸ ಅಷ್ಟು ತುರ್ತಿನದ್ದಲ್ಲದಿದ್ದರೂ ಅವರನ್ನು ಕಳೆದುಕೊಳ್ಳದಂತೆ ನೋಡಿಕೊಳ್ಳಬೇಕಾಗಿತ್ತು. ಸುಜಾತಾಳ ಗೈರುಹಾಜರಿಯಲ್ಲಿ ಸಂಸ್ಥೆಯೊಂದಿಗೆ